# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 297 |
| 2. | ಸದಸ್ಯರ ಹೆಸರು | : | ಶ್ರೀ ಸಿ.ಟಿ.ರವಿ (ವಿಧಾನಸಭೆಯಿಂದ ಚುನಾಯಿತರಾದವರು) |
| 3. | ಉತ್ತರಿಸಬೇಕಾದ ದಿನಾಂಕ | : | 18.07.2024. |
| 4. | ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | 2022-23ನೇ ಸಾಲಿನ ಹಣಕಾಸು ವರ್ಷದಲ್ಲಿ ರಾಜ್ಯ ಸಂಚಿತ ನಿಧಿಗೆ ಬಂದಿರುವ ಮೊತ್ತ ಎಷ್ಟು; ಈ ಪೈಕಿ ಬಳಕೆಯಾಗದ ಹಣ ಎಷ್ಟು; ಈ ಮೊತ್ತವು ರಾಜ್ಯ ಖಜಾನೆಯಲ್ಲಿ ಸ್ವೀಕೃತವಾಗಿದೆಯೇ; | 2022-23ನೇ ಸಾಲಿನ ಹಣಕಾಸು ವರ್ಷದಲ್ಲಿ ರಾಜ್ಯ ಸಂಚಿತ ನಿಧಿಗೆ ಬಂದಿರುವ ಮೊತ್ತ, ಬಳಕೆಯಾದ/ವೆಚ್ಚದ ಮೊತ್ತದ ವಿವರಗಳು ಈ ಕೆಳಕಂಡಂತಿರುತ್ತವೆ. (see table below) |
| ಆ | ಈ ಮೊತ್ತವನ್ನು ಸಂಚಿತ ನಿಧಿಯಿಂದ ಹೊರಗೆ ಇರಿಸಲಾಗಿದೆಯೇ; ಈ ಮೊತ್ತವನ್ನು ರಿಕವರಿ ಆಫ್ ಓವರ್ ಪೇಮೆಂಟ್ ಎಂದು ವ್ಯಾಖ್ಯಾನಿಸಿರುವುದರ ಅರ್ಥ ಏನು; | ರಿಕವರಿ ಆಫ್ ಓವರ್ ಪೇಮೆಂಟ್ ಅಂದರೆ ನಿಗಧಿತ ಮೊತ್ತಕ್ಕಿಂತ ಹೆಚ್ಚುವರಿ ಮೊತ್ತವನ್ನು ಕಾರಣಾಂತರಗಳಿಂದ ಪಾವತಿ ಮಾಡಿರುವುದು ಕಂಡುಬಂದಲ್ಲಿ, ಸದರಿ ಮೊತ್ತವನ್ನು ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಾಡಬೇಕಾಗುತ್ತದೆ. ಪ್ರಸುತ ಇರುವ ಲೆಕ್ಕ ಪದ್ದತಿ ಅನ್ವಯ ರಿಕವರಿ ಆಫ್ ಓವರ್ ಪೇಮೆಂಟ್ ರಡಿ ಅನುದಾನ ಬಿಡುಗಡೆ ಮಾಡಿದ ಪ್ರಧಾನ ಲೆಕ್ಕ ಶೀರ್ಷಿಕೆಗೆ ಸದರಿ ಮೊತ್ತವನ್ನು ಜಮಾ ಮಾಡಲಾಗುತ್ತದೆ. |
| ಇ | ಕಳೆದ ಒಂದು ವರ್ಷದಿಂದ ಸಂಚಿತ ನಿಧಿಯಿಂದ ಹೊರಗೆ ಇರಿಸಲಾದ ಒಟ್ಟು ಮೊತ್ತ ಎಷ್ಟು; ಈ ರೀತಿ ಸಂಚಿತ ನಿಧಿಯಿಂದ ಹೊರಗೆ ಇರಿಸಲು ಕಾರಣಗಳೇನು? | ರಾಜ್ಯದ ಸರ್ಕಾರದ ಸ್ವೀಕೃತಿಗಳನ್ನು ಸಂಚಿತ ನಿಧಿಗೆ ಜಮಾ ಮಾಡಲಾಗುವುದು. ಆಯವ್ಯಯ ಅಂದಾಜು ಅಥವಾ ಪೂರಕ ಅಂದಾಜುಗಳಿಗೆ ಮಾನ್ಯ ವಿಧಾನಮಂಡಲದ ಉಭಯ ಸದನಗಳ ಅನುಮೋದನೆ ಪಡೆದ ನಂತರವೇ ಸಂಚಿತ ನಿಧಿಯಲ್ಲಿನ ಅನುದಾನವನ್ನು ಸೆಳೆಯಲಾಗುತ್ತದೆ.<br>ವಿಧಾನಮಂಡಲದ ಅನುಮೋದನೆ ಇಲ್ಲದೇ, ಅನುದಾನವನ್ನು ಸಂಚಿತ ನಿಧಿಯಿಂದ ಹೊರಗಿಡಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ. |

| | ವಿವರಗಳು | ಸಂಚಿತ ನಿಧಿ (ರೂ. ಕೋಟಿಗಳಲ್ಲಿ) |
|---|---|---|
| 1 | ಒಟ್ಟಾರೆ ಸ್ವೀಕೃತಿಗಳ ವಿವರ | 274108.99 |
| 2 | ಒಟ್ಟಾರೆ ವೆಚ್ಚದ ವಿವರ | 292125.01 |
| | ನಿವ್ವಳ (+/-) | -18016.02 |

ಸಂಖ್ಯೆ: ಆಇ 45 ಬಿಜಿಎಲ್ 2024

(ಸಿದ್ದರಾಮಯ್ಯ)
ಮುಖ್ಯಮಂತ್ರಿ